ಚಿತ್ರ: ಪ್ರೀತಿ ವಾತ್ಸಲ್ಯ (1984)
ಹಿನ್ನಲೆ ಗಾಯಕ: ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂಗೀತ: ರಾಜನ್–ನಾಗೇಂದ್ರ

ಸ್ನೇಹಿತರೇ... ನಿಮಗೆ ಸ್ವಾಗತ
ನನ್ನೆದೆಯಾ ಪ್ರೀತಿ ಸ್ವಾಗತ
ಎಂದೆಂದೂ ನೆನಪಿರಲಿ ಈ ಸುದಿನ
ಸಂತೋಷದ ಈ ಶುಭಮಿಲನ ॥ ಪ ॥

ರಸಪೂರ್ಣ ರಂಗಾದ ಸಂಜೆಯಲಿ
ಸವಿ ಸ್ನೇಹ ತಂದಂಥ ವೇಳೆಯಲಿ
ನಾ ಹಾಡುವ ಈ ಹಾಡಿನ.. ತಾಳ ಮೇಳ ಸೇರಿ ತೂಗಲೀಗ
ಕ್ಷಣವೊಂದು ಕಣ್ಣೋಟ ಸೇರಿದಾಗ
ಸವಿಮಾತು ತಮ್ಮಲ್ಲೇ ಆಡಿದಾಗ
ಆ ಮೌನದ ಪಿಸುಮಾತಿಗೆ ಸಾಟಿಯಾದ ಯಾವ ಪ್ರೇಮ ಕಾವ್ಯವಿಲ್ಲ
ಹೃದಯ ಹಗುರಾಗಿ ಇರಲಿ..
.. .. ಪ್ರೀತಿ ವಾತ್ಸಲ್ಯಗಳಲಿ ॥ 1 ॥

ತನ್ನಾಸೆ ಮಗನಲ್ಲಿ ತಾಯಿಯ ಪ್ರೀತಿ
ಒಲಿದಂಥ ಪತಿಯಲ್ಲಿ ಪತ್ನಿಯ ಪ್ರೀತಿ
ಒಡಹುಟ್ಟಿದ ಸಂಬಂಧವು ತರುವಂಥ ಸಮಧುರ ಪ್ರೀತಿ
ಪ್ರಿಯನಲ್ಲಿ ಪ್ರೇಯಸಿಯು ತೋರುವ ಪ್ರೀತಿ
ನಿಜಸ್ನೇಹ ತಂದಂಥ ನಿರ್ಮಲ ಪ್ರೀತಿ
ಈ ಪ್ರೀತಿಯು.. ವಿಶ್ವಾಸವು.. ಬಾಳಲಿ ಇರಲೆಂದು
ಶಾಶ್ವರ ರೀತಿ.. ಮನಸು ಹಾಯಾಗಿ..
... ... ಪ್ರೀತಿ ವಾತ್ಸಲ್ಯಗಳಲಿ ॥ 2 ॥